**ಇಂದು ದಿಃ 04-11-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಶ್ರೀ ಸಿ.ಕೆ. ವಕೀಲರಿಂದ ಎದುರುದಾರರ ಪರಃ

1 ನೇ ಎದುರುದಾರರ ಊರು ಗೊತ್ತು, ಆದರೆ 2 ನೇ ಎದುರುದಾರರು ಯಾವ ಊರಿನವರು ಎಂದು ಗೊತ್ತಿರುವುದಿಲ್ಲ. ನಾನು ನನ್ನ ವಕೀಲರಿಗೆ 1 ನೇ ಎದುರುದಾರರ ವಿರುದ್ದ ಪ್ರಕರಣ ದಾಖಲು ಮಾಡಲು ಹೇಳಿದ್ದೆನು. 2 ನೇ ಎದುರುದಾರರು ಯಾರು ಎಂದು ಗೊತ್ತಿಲ್ಲ. ನನ್ನ ಅರ್ಜಿ ಸಲ್ಲಿಸಲು ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ನನ್ನ ವಕೀಲರಿಗೆ 2 ನೇ ಎದುರುದಾರರ ವಿರುದ್ದ ಅರ್ಜಿ ಸಲ್ಲಿಸಲು ಮಾಹಿತಿಕೊಟ್ಟಿರುವುದಿಲ್ಲ.

ತಿಂಗಳಿಗೆ ರೂ.25 ಸಾವಿರ ಆದಾಯ ಇದ್ದ ಬಗ್ಗೆ ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ಅದೇ ರೀತಿ ವ್ಯವಸಾಯ ಮಾಡುತ್ತಿದ್ದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. 1 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಯಿತ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ರೂ.2 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಕುರಿತು ನನ್ನ ತಾಯಿ ಪಿರ್ಯಾದಿ ಕೊಟ್ಟಿರುತ್ತಾಳೆ. ನನ್ನ ತಾಯಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಅಪಘಾತದ ಬಗ್ಗೆ ನನ್ನ ತಾಯಿಗೆ ಮಾಹಿತಿ ಕೊಟ್ಟಿದ್ದೇನು. ನನ್ನ ತಾಯಿ ಯಾವ ದಿನಾಂಕದೊಂದು ಪಿರ್ಯಾದಿಕೊಟ್ಟಿರು ಎಂದು ಗೊತ್ತಿಲ್ಲ. ಪೋಲೀಸರು ಸ್ಥಳಪಂಚನಾಮೆ ಮಾಡುವ ಸಂಧರ್ಭದಲ್ಲಿ ನಾನು ಸ್ಥಳಕ್ಕೆ ಹೋಗಿರುವುದಿಲ್ಲ. ನಾನು ವಾಹನ ಸಂಖ್ಯೆ ಕೆ.ಎ-17 ಸಿ-8742 ಇದನ್ನು ಚಲಾವಣೆ ಮಾಡಿಕೊಂಡು ಹೊರಟಿದ್ದೆನು. ನನ್ನದು ಪ್ಯಾಸೆಂಜರ್ ಆಟೋ ಇರುತ್ತದೆ. ನಾನು ಮಲೆಬೆನ್ನೂರಿಗೆ ಹೊರಟಿದ್ದೆನು. ಬೆಳಿಗ್ಗೆ 6ಃ30

ಘಂಟೆಗೆ ಅಪಘಾತ ಆಗಿರುತ್ತದೆ. ಆ ಸಮಯದಲ್ಲಿ ಆಟೋದಲ್ಲಿ ಯಾರೂ ಪ್ರಯಾಣಿಕರು ಇರಲಿಲ್ಲ. ನನ್ನ ಆಟೋದ ದಾಖಲೆಗಳನ್ನು ನಾನು ಪೋಲೀಸರಿಗೆ ಕೊಟ್ಟಿದ್ದೇನೆ. 1 ನೇ ಎದುರುದಾರ ಆಟೋ ನಂಬರ್ ಕೆ.ಎ-27 -5685 ಇದನ್ನು ಮಲೆಬೆನ್ನೂರು ಕಡೆಗೆ ನನ್ನ ಮುಂದೆ ತೆಗೆದುಕೊಂಡು ಹೊರಟಿದ್ದನು ಎಂದರೆ ಸರಿಯಲ್ಲ. 1 ನೇ ಎದುರುದಾರ ಮಲೆಬೆನ್ನೂರು ಕಡೆಗೆ ಹೊರಟಾಗ ನಾನು, ಬೇಗ ಹೋಗುವ ಉದ್ದೇಶದಿಂದ ನಾನೇ ಆತನ ಆಟೋಗೆ ವೇಗವಾಗಿ ಹೋಗಿ, ಡಿಕ್ಕಿ ಪಡಿಸಿದೆನು ಎಂದರೆ ಸರಿಯಲ್ಲ. ನಾನು ಡಿಕ್ಕಿ ಪಡಿಸಿದ ಕಾರಣ 1 ನೇ ಎದುರುದಾರರ ಆಟೋ ರಸ್ತೆಯ ಎಡಬದಿಯಲ್ಲಿರುವ ಚರಂಡಿಗೆ ಬಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ಆಟೋದ ಮುಂದಿನ ಭಾಗ ಜಖಂ ಆಯಿತು ಎಂದರೆ ಸರಿಯಲ್ಲ. ಆ ಕಾರಣದಿಂದ 1 ನೇ ಎದುರುದಾರರ ಬಲಗೈ ಮೂಳೆ ಮುರಿತ ಆಯಿತು ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆದ ಕಾರಣ 1 ನೇ ಎದುರುದಾರನ ಕೈಯ ಮೂಳೆ ಮುರಿತ ಆಗಿ ಆತನಿಗೆ ಶಸ್ತ್ರಚಿಕಿತ್ಸೆ ಮಾಡಲಾಯಿತು ಎಂದರೆ ಸರಿಯಲ್ಲ.

ನಾನೇ ಅಪಘಾತಪಡಿಸಿದ್ದರೂ, ನನ್ನ ವಾಹನಕ್ಕೆ ಯಾವುದೇ ಸೂಕ್ತ ದಾಖಲೆಗಳು ಇಲ್ಲದೇ ಇದ್ದ ಕಾರಣ, 1 ನೇ ಎದುರುದಾರರ ವಿರುದ್ಧ ಸುಳ್ಳು ಪಿರ್ಯಾದಿ ಕೊಟ್ಟೆನು ಎಂದರೆ ಸರಿಯಲ್ಲ. 1 ನೇ ಎದುರುದಾರ ಪೋಲೀಸ್ ಠಾಣೆಯಲ್ಲಿ ಪರಮೇಶ್ವರಪ್ಪ ಎನ್ನುವವರ ಸಮಕ್ಷಮ ಆಸ್ಪತ್ರೆಯ ಖರ್ಚಿಗೆ ರೂ.30 ಸಾವಿರ ಕೊಡುತ್ತೇನೆ ಎಂದು ಹೇಳಿದ್ದನು. ಆದರೆ ಆಸ್ಪತ್ರೆಯ ಖರ್ಚು ರೂ.2 ಲಕ್ಷ ಬಂದ ಕಾರಣ, ನಾನು ಪರ್ಯಾದಿ ಸಲ್ಲಿಸಿದ್ದೆನು. 1 ನೇ ಎದುರುದಾರ ರೂ.30 ಸಾವಿರ ಕೊಡುವುದಾಗಿ ಒಪ್ಪಿದ್ದನು ಎಂದು, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಚಿಕಿತ್ಸೆ ಸೇರಿ ರೂ.30 ಸಾವಿರ ಕೊಡಬೇಕು ಎಂದು ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ಕಡೆಯಿಂದ ರೂ.30 ಸಾವಿರ ಹಣ ಪಡೆದಿದ್ದೇನೆ. ಸಾಕ್ಷಿ ನನ್ನ ತಾಯಿ ಪಡೆಕೊಂಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ, 1 ನೇ ಎದುರುದಾರ ಚಿಕಿತ್ಸೆ ಹಣ ಕೊಟ್ಟಿದ್ದರೂ ಪೋಲೀಸರ ಜೊತೆಗೆ ಶಾಮೀಲಾಗಿ ಸುಳ್ಳು ಪಿರ್ಯಾದಿಕೊಟ್ಟೆನು

ಎಂದರೆ ಸರಿಯಲ್ಲ. ಅಪಘಾತವು ದಿನಾಂಕ:30-12-2016 ರಂದು ಆಗಿರುತ್ತದೆ. ನಾನು ಸುಮಾರು 2 ತಿಂಗಳು ಬಿಟ್ಟು ಫಿರ್ಯಾದಿಕೊಟ್ಟೆನು. ಯಾವ ದಿನಾಂಕದೊಂದು ಫಿರ್ಯಾದಿ ಕೊಟ್ಟೆನು ಎಂದು ನನಗೆ ಹೇಳಲು ಆಗುವುದಿಲ್ಲ.

ನಾನು ಪಂಚನಾಮೆಯ ಜೊತೆಗೆ ಪೋಲೀಸರು ತಯಾರಿಸಿದ ಕಚ್ಚಾ ನಕಾಶೆಯನ್ನು ಈ ಅರ್ಜಿಯಲ್ಲಿ ಹಾಜರುಪಡಿಸಿದ್ದೇನೋ ಇಲ್ಲವೋ ಗೊತ್ತಿಲ್ಲ. ಕಚ್ಚಾ ನಕಾಶೆ ಹಾಜರುಪಡಿಸಿಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ನೋಡದೇ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಕಚ್ಚಾ ನಕಾಶೆಯ ದೃ.ನಕಲನ್ನು ತೋರಿಸಿ ಕೇಳಲು ಗುರುತಿಸಿದ್ದು, ಅದನ್ನು ನಿ.ಆರ್-1 ಎಂದು ಗುರುತಿಸಲಾಯಿತು. ಪೋಲೀಸರು ಸದರಿ ರಸ್ತೆ 11 ಅಡಿ ಅಗಲ ಇದೆ ಎಂದು ನಮೂದಿಸಿದ್ದಾರೆ ಎಂದರೆ ಗೊತ್ತಿಲ್ಲ. ಚಕ್ ಬಂದಿಯಲ್ಲಿ ಪೂರ್ವಕ್ಕೆ ಕುಂದೂರು ಹಾಲಿವಾಣ ರಸ್ತೆ, ಪಶ್ಚಿಮಕ್ಕೆ ಕೊಮಾರನಹಳ್ಳಿ ರಸ್ತೆ, ಉತ್ತರಕ್ಕೆ ರಾಜಣ್ಣ ಎನ್ನುವವರ ಜಮೀನು ಎಂದು ಬರೆದಿದ್ದಾರೆ ಎಂದರೆ ಸಾಕ್ಷಿ ದಕ್ಷಿಣಕ್ಕೆ ಕುಂದೂರು ರಸ್ತೆ, ಪಶ್ಚಿಮಕ್ಕೆ ರಾಜಪ್ಪನ ಜಮೀನು ಬರುತ್ತದೆ ಎಂದು ಹೇಳುತ್ತಾರೆ. ನಿ.ಆರ್-1 ರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ. ಪಂಚನಾಮೆಗೆ ಸಹಿ ಮಾಡಿದ ಕರಿಯಪ್ಪ ನಮ್ಮೂರಿನವರು ಇರುತ್ತಾರೆ. ನನಗೆ ಪರಿಚಯಸ್ತರು ಇರುತ್ತಾರೆ. ಟಿ.ಬಸವರಾಜ ಇವರು ಸಹ ನಮ್ಮೂರಿನವರು ಮತ್ತು ಪರಿಚಯಸ್ತರು ಇರುತ್ತಾರೆ. ಇನ್ನೊಬ್ಬ ಮಲ್ಲಿಕಾರ್ಜುನ ಯಾರು ಎಂದು ಗೊತ್ತಾಗುತ್ತಿಲ್ಲ. ಸ್ಥಳ ಪಂಚನಾಮೆಯ ಪಂಚರು ನಮ್ಮೂರಿನವರು ಮತ್ತು ನನ್ನ ಪರಿಚಯಸ್ತರು ಇರುವ ಕಾರಣ, ನಮಗೆ ಬೇಕಾದ ಹಾಗೇ ಸ್ಥಳಪಂಚನಾಮೆಯನ್ನು ತಯಾರು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಎದುರುದಾರನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣದಲ್ಲಿ ಆತನ ಬಿಡುಗಡೆ ಆಗಿದೆ ಎಂದರೆ ಗೊತ್ತಿಲ್ಲ. ಅಪಘಾತ 1 ನೇ ಎದುರುದಾರನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ನನಗೆ ಅನುಕೂಲ ಆಗುವ ರೀತಿಯಲ್ಲಿ ಸೃಷ್ಠಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಬಿಲ್ ಗಳನ್ನು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಠಿ ಮಾಡಿ

ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ತಿಳಿಸಿದ ಹಾಗೇ ನನಗೆ ಯಾವುದೇ ಅಂಗನ್ಯೂನತೆಯಾಗಿಲ್ಲ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**